10ನೇ ತಾರೀಕು ಪ್ರಶಸ್ತಿ ವಿತರಣೆ ಮಾಡುತ್ತಿದ್ದಾರೆ; ನಂತರದ ವೈಭವೋಪೇತ ಭೋಜನಕೂಟದಲ್ಲಿ ಭಾಗವಹಿಸುತ್ತಿದ್ದಾರೆ. ಆ ದಿನವನ್ನು ಇಡೀ ಸ್ಟಾಕ್‌ಹೋಮ್ ನಗರ ಹಬ್ಬದ ರೂಪದಲ್ಲಿ ಆಚರಿಸುತ್ತಿದೆ.

ಪ್ರಸ್ತುತ ನೊಬೆಲ್ ಪ್ರಶಸ್ತಿಗೆ ಜಾಗತಿಕವಾಗಿ ಅಪಾರ ಮನ್ನಣೆಯಿದೆ. ನೊಬೆಲ್ ಬಹುಮಾನಿತರು ಎಷ್ಟು ಮಂದಿ ಇದ್ದಾರೆ ಎಂಬುದು ವಿಶ್ವವಿದ್ಯಾಲಯಗಳ ಮಹತ್ವವನ್ನು ಅಳೆಯುವ ಮಾನದಂಡವಾಗಿದೆ.


ಎಲ್ಲಾ ಮೇಧಾವಿಗಳಿಗೂ ಸಾಧಕರಿಗೂ ನೊಬೆಲ್ ಲಭಿಸುತ್ತದೆ ಎಂದು ಹೇಳಲಾಗುವುದಿಲ್ಲ. ಹಲವು ಶ್ರೇಷ್ಠ ಸಾಧಕರು ನೊಬೆಲ್ ಗೌರವದ ಹೊರಗೇ ಉಳಿದಿದ್ದಾರೆ. ಮಹಾತ್ಮ ಗಾಂಧಿ ಇದಕ್ಕೆ ಉತ್ತಮ ಉದಾಹರಣೆ. ಅವರ ಹೆಸರನ್ನು ಪ್ರಶಸ್ತಿಗೆ ಆರು ಬಾರಿ ಸೂಚಿಸಲಾಗಿತ್ತು. ಟಾಲ್‌ಸ್ಟಾಯ್, ಎಡಿಸನ್, ಜೇಮ್ಸ್ ಜಾಯ್ಸ್ ಅವರಂಥ ಗಣ್ಯರಿಗೂ ನೊಬೆಲ್ ಸಂದಿಲ್ಲ. ನಮ್ಮವರೇ ಆದ ವಿಜ್ಞಾನಿ ಇ ಸಿ ಜಿ ಸುದರ್ಶನ್ ಅವರನ್ನೂ ಇಲ್ಲಿ ಹೆಸರಿಸಬಹುದು.

2020ರ ಭೌತಶಾಸ್ತ್ರದ ಬಹುಮಾನಿತರ ಪಟ್ಟಿಯಲ್ಲಿ ರೋಜರ್ ಪೆನ್ ರೋಸ್ ಅವರ ಹೆಸರಿದೆ. ಇವರು ಎರಡು ವರ್ಷಗಳ ಹಿಂದೆ ನಿಧನರಾದ ಸ್ಟೀಫನ್ ಹಾಕಿಂಗ್ ಅವರಿಗಿಂತ ಹತ್ತು ವರ್ಷ ದೊಡ್ಡವರು ಮತ್ತು ಇಬ್ಬರೂ ಕೂಡಿ ಕಪ್ಪುಕುಳಿಗಳ ಅಧ್ಯಯನ ಮಾಡಿದರು. ಆದರೆ ಈ ಸಂಶೋಧನೆಯನ್ನು ಈಗ ಗುರುತಿಸಿರುವ ನೊಬೆಲ್ ಸಂಸ್ಥೆ ಹಾಕಿಂಗ್ ಅವರ ಹೆಸರನ್ನು ಕೈಬಿಟ್ಟಿದೆ. ಕಾರಣ ಅವರೀಗ ಬದುಕಿಲ್ಲ. ಎರಡು ವರ್ಷದ ಹಿಂದೆಯೇ ಈ ಸಂಶೋಧನೆಗೆ ಮನ್ನಣೆ ಸಿಕ್ಕಿದ್ದರೆ ಹಾಕಿಂಗ್ ಅವರಿಗೂ ಪ್ರಶಸ್ತಿ ಸಲ್ಲುತ್ತಿತ್ತು ಎನಿಸುತ್ತದೆ.

## ಬಹುಮಾನಿತರೂ ಮಾನವರು

ನೊಬೆಲ್ ಬಹುಮಾನಿತರೂ ನಮ್ಮಂತೆಯೇ ಮನುಷ್ಯರು. ಹಾಗಾಗಿ ಅವರ ವರ್ತನೆಯಲ್ಲಿಯೂ ಏರುಪೇರುಗಳು ಕಾಣುತ್ತವೆ. ಆ ನಡವಳಿಕೆಗಳು ಅವರ ಘನತೆಯನ್ನು ಕುಗ್ಗಿಸುವುದಿಲ್ಲ. ಆದರೆ, ಅವರೂ ನಮ್ಮಂತೆಯೇ ಎನ್ನುವುದನ್ನು ಎತ್ತಿ ತೋರಿಸುತ್ತವೆ.

ಆಲ್ಬರ್ಟ್ ಐನ್‌ಸ್ಟೈನ್ (1879–1955) ಹೆಸರನ್ನು ಕೇಳದವರಾರು? ಸಾಪೇಕ್ಷ ಸಿದ್ಧಾಂತವನ್ನು ಕಂಡು ಹಿಡಿದು ನಮ್ಮ ಕೆಲವು ನಂಬಿಕೆಗಳನ್ನು ಬುಡಮೇಲು ಮಾಡಿದ ವಿಜ್ಞಾನಿಯವರು. ಅವರಿಗೆ ವಿಶ್ವವಿದ್ಯಾಲಯದಲ್ಲಿ ಕೆಲಸ ಕೊಡಲು ಪ್ರೊಫೆಸರುಗಳು ನಿರಾಕರಿಸಿದರು. ಕಾರಣ ತನ್ನ ಉಪಾಧ್ಯಾಯರುಗಳೊಡನೆ ಐನ್‌ಸ್ಟೈನ್ ಒರಟಾಗಿ ವರ್ತಿಸುತ್ತಿದ್ದುದು. ಈ ಒರಟು ವರ್ತನೆಯಿಂದಾಗಿಯೇ, ಆತನ ಹೆಸರು ಐದಾರು ವರ್ಷ ಸೂಚಿತವಾಗಿದ್ದರೂ ನೊಬೆಲ್ ಸಂಸ್ಥೆ ಪ್ರಶಸ್ತಿ ನೀಡಲಿಲ್ಲ. ಕೊನೆಗೆ ಓರ್ವ ಫ್ರೆಂಚ್ ವಿಜ್ಞಾನಿ ನೊಬೆಲ್ ಸಂಸ್ಥೆಗೆ ಪತ್ರ ಬರೆದು, 'ಇನ್ನು ನೂರು ವರ್ಷಗಳಾದ ಮೇಲೆ ಜನ ಐನ್‌ಸ್ಟೈನರಿಗೆ ನೊಬೆಲ್ ಬಹುಮಾನ ಬರಲಿಲ್ಲ ಎಂಬುದನ್ನು ಅರಿತಾಗ ಅವಮಾನವಾಗುವುದು ಅವನಿಗಲ್ಲ.



ಐನ್‌ಸ್ಟೈನ್ ಅವರಿಗೆ ನೊಬೆಲ್ ರೂಪದಲ್ಲಿ ದೊರಕಿದ್ದು ಪದಕ ಮಾತ್ರ

ಅವನಿಗೆ ಬಹುಮಾನ ಕೊಡದೇ ಹೋದ ನಿಮಗೆ' ಎಂದು ಎಚ್ಚರಿಸಿದರು. ಆಗ ಜಾಗೃತವಾದ ಸಂಸ್ಥೆ ಐನ್‌ಸ್ಟೈನರಿಗೆ 1921ರ ಭೌತಶಾಸ್ತ್ರ ವಿಭಾಗದಲ್ಲಿ ಪ್ರಶಸ್ತಿ ನೀಡಿತು. ಆದರೆ ಆ ಗೌರವ ನೀಡಿದ್ದು ಸಾಪೇಕ್ಷ ಸಿದ್ಧಾಂತಕ್ಕಲ್ಲ; ಆತನೇ ಕಂಡುಹಿಡಿದ ಫೋಟೋ ಎಲೆಕ್ಟ್ರಿಕ್ ಪರಿಣಾಮಕ್ಕಾಗಿ. ತನ್ನ ಪ್ರಶಸ್ತಿ ಸ್ವೀಕಾರ ಭಾಷಣದಲ್ಲಿ ಐನ್‌ಸ್ಟೈನ್ ಕೇವಲ ಸಾಪೇಕ್ಷ ಸಿದ್ಧಾಂತದ ಬಗ್ಗೆ ಮಾತನಾಡಿದ!

ಐನ್‌ಸ್ಟೈನ್ ಮೊದಲ ಹೆಂಡತಿ ಮಿಲೇವಾ. ಇಬ್ಬರ ಸಂಬಂಧ ಹಿತಕರವಾಗಿರಲಿಲ್ಲ. 1919ರಲ್ಲಿ ವಿಚ್ಛೇದನವಾಯಿತು. ಆಕೆ ತೀರಾ ಬುದ್ಧಿವಂತೆ. ಐನ್‌ಸ್ಟೈನ್‌ಗೆ ಮುಂದೆ ಬರಬಹುದಾದ ನೊಬೆಲ್ ಪ್ರಶಸ್ತಿಯ ಮೊತ್ತ ನನಗೆ ಸಲ್ಲಬೇಕು ಎಂದು ಕರಾರು ಮಾಡಿಕೊಂಡು ವಿಚ್ಛೇದನ ನೀಡಿದ್ದಳು. ಹೀಗಾಗಿ ಐನ್‌ಸ್ಟೈನ್ ಅವರಿಗೆ ಸಿಕ್ಕಿದ್ದು ಪದಕ ಮಾತ್ರ! ಭಾರೀ ಮೊತ್ತ ಮಿಲೇವಾಗೆ ಕೂಡ ದಕ್ಕಲಿಲ್ಲ. ಆಕೆ ಹಣವನ್ನು ಮನೆಯಲ್ಲಿ ಜಮಖಾನೆಯ ಕೆಳಗೆ ಮತ್ತು ಒಲೆಯಲ್ಲಿ ಬಚ್ಚಿಟ್ಟಿದ್ದಳು. ಅಗ್ನಿ ಆಕಸ್ಮಿಕದಲ್ಲಿ ಹಣ ಬೂದಿಯಾಯಿತು.

ಮೇರಿ ಕ್ಯೂರಿ (1867–1934) ಅವರದು ಬೇರೆಯೇ ಕತೆ. ರೇಡಿಯಂ ಕಂಡುಹಿಡಿದು ಮೇರಿ ವಿಶ್ವವಿಖ್ಯಾತರಾದರು. ಆಕೆಗೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ಎರಡು ವಿಭಾಗದಲ್ಲೂ ನೊಬೆಲ್ ಪ್ರಶಸ್ತಿ ಲಭಿಸಿತು. ಮತ್ತಾರಿಗೂ ಈ ಜೋಡಿ ಪ್ರಶಸ್ತಿಯ ಗೌರವ ಸಿಕ್ಕಿಲ್ಲ.

ಮೇರಿ ಕ್ಯೂರಿ, ಆಕೆಯ ಗಂಡ ಪಿಯರಿ ಕ್ಯೂರಿ, ಮಗಳು ಐರೀನ್, ಅಳಿಯ ಜೋಲಿಯೋಟ್, ಮತ್ತೊಬ್ಬ ಅಳಿಯ ಲಬೌಸಿ – ಎಲ್ಲರೂ ನೊಬೆಲ್ ವಿಜೇತರೇ. ಕುಟುಂಬದ ಐದು ಜನ ನಾಲ್ಕು ಬಹುಮಾನಗಳನ್ನು ಹಂಚಿಕೊಂಡಿದ್ದಾರೆ. 1903ರಲ್ಲಿ ಮೇರಿ ಕ್ಯೂರಿ ಮತ್ತು ಪಿಯರಿ ಕ್ಯೂರಿ ಅವರಿಗೆ ಭೌತಶಾಸ್ತ್ರದ ಬಹುಮಾನ ನೀಡಲಾಯಿತು. ಇದೋ ಕೇಳಿ ಸ್ವಾರಸ್ಯ. ಬಹುಮಾನಕ್ಕೆ ಹೆಸರುಗಳನ್ನು ಸೂಚಿಸಿದ ಫ್ರೆಂಚ್ ಪಂಡಿತವರೇಣ್ಯರು ಮೇರಿಯ ಹೆಸರನ್ನು ಬೇಕೆಂದೇ ಬಿಟ್ಟಿದ್ದರು. ಕಾರಣ, ಆಕೆ ಹೆಂಗಸು, ಅದೂ ವಿದೇಶದ ಹೆಂಗಸು! (ಮೇರಿ ಹುಟ್ಟಿ ಬೆಳೆದದ್ದು ಪೋಲೆಂಡಿನಲ್ಲಿ). ಈ ಹುನ್ನಾರವನ್ನು ಹೇಗೋ ಅರಿತ ಪಿಯರಿ, ನೊಬೆಲ್ ಸಂಸ್ಥೆಗೆ ಪತ್ರ ಬರೆದು, 'ಬಹುಮಾನ ಕೊಡುವುದಾದರೆ ಇಬ್ಬರಿಗೂ ಕೊಡಿ. ನನಗೆ ಮಾತ್ರ ನೀಡಿದರೆ ನಾನು ಸ್ವೀಕರಿಸುವುದಿಲ್ಲ'



ಎರಡು ಬಾರಿ ನೊಬೆಲ್ ಪಡೆದ ಏಕೈಕ ವ್ಯಕ್ತಿ ಮೇರಿ ಕ್ಯೂರಿ

ಎಂದು ತಿಳಿಸಿದ. ಆಗ ಮೇರಿಯ ಹೆಸರನ್ನು ಸೇರಿಸಲಾಯಿತು.

ಮೇರಿಗೆ 1911ರಲ್ಲಿ ದೊರೆತ ರಸಾಯನ ಶಾಸ್ತ್ರ ವಿಭಾಗದ ಪ್ರಶಸ್ತಿಯ ಕತೆಯೇ ಬೇರೆ! ಆ ವೇಳೆಗೆ ಪಿಯರಿ ನಿಧನನಾಗಿದ್ದ. ಪಿಯರಿಯ ವಿದ್ಯಾರ್ಥಿಯಾಗಿದ್ದ ಪಾಲ್ ಲಾಂಜೆವಾನ್ ಎಂಬ ವಿಜ್ಞಾನಿಯೊಡನೆ ಮೇರಿ ಸಂಬಂಧ ಹೊಂದಿದ್ದಳು. ಅವನ ಹೆಂಡತಿ ಮತ್ತು ಪ್ಯಾರಿಸ್ಸಿನ ಪತ್ರಿಕೆಗಳು ಗೂಢಚಾರರನ್ನು ನೇಮಿಸಿ ಅವರಿಬ್ಬರ ಕತೆಯನ್ನು ಬಯಲು ಮಾಡಿದರು. ಕುಪಿತನಾದ ಲಾಂಜೆವಾನ್ ಪತ್ರಿಕೆಯ ಸಂಪಾದಕರನ್ನು ತರಾಟೆಗೆ ತೆಗೆದುಕೊಂಡ. ನಂತರ ಸಂಪಾದಕ ಮತ್ತು ಲಾಂಜೆವಾನ್ ಇಬ್ಬರೂ ಬಹಿರಂಗವಾಗಿ ಪಿಸ್ತೂಲುಗಳನ್ನು ಹಿಡಿದು ಪಾರ್ಕ್ ಒಂದರಲ್ಲಿ ಕಾಳಗಕ್ಕೆ ನಿಂತರು. ಸಂಪಾದಕ ಪಿಸ್ತೂಲನ್ನು ಗುರಿಹಿಡಿದ. ಆಗ ಅವನಿಗೆ, ಇಂತಹ ಮೇಧಾವಿ ವಿಜ್ಞಾನಿಯನ್ನು ಕೊಲ್ಲುವುದೇ ಎನ್ನಿಸಿ ಪಿಸ್ತೂಲನ್ನು ನೆಲಕ್ಕೆ ಹಾಕಿದ. ಇಬ್ಬರಿಗೂ ರಾಜಿ ಆಯಿತು. ಕತೆ ಇಲ್ಲಿಗೆ ಮುಗಿಯುವುದಿಲ್ಲ. ಕಾಲಾನಂತರ ಮೇರಿಯ ಮೊಮ್ಮಗಳು ಲಾಂಜೆವಾನನ ಮೊಮ್ಮಗನನ್ನು ಮದುವೆಯಾದಳು!

ವೈಯಕ್ತಿಕ ಬದುಕಿನ ಘಟನೆಗಳು ಸುದ್ದಿಯಾಗಿದ್ದ ಸಂದರ್ಭದಲ್ಲಿ ಮೇರಿ ಅವರನ್ನು ಎರಡನೇ ಬಾರಿ ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಆಗ ಅವರಿಗೆ ಆಯೋಜಕರು ಬರೆದ ಪತ್ರದಲ್ಲಿ, 'ನೀವು ಪ್ರಶಸ್ತಿ ಸ್ವೀಕರಿಸಲು ಸ್ಟಾಕ್‌ಹೋಮಿಗೆ ಬರಬೇಡಿ. ಅದನ್ನು ನಾವೇ ನಿಮ್ಮಲ್ಲಿಗೆ ಕಳುಹಿಸಿಕೊಡುತ್ತೇವೆ' ಎಂದು ತಿಳಿಸಲಾಗಿತ್ತು. ಕೋಪಗೊಂಡ ಮೇರಿ, 'ನನ್ನ ಸಂಶೋಧನೆ ಮತ್ತು ವೈಯಕ್ತಿಕ ವರ್ತನೆ ಪ್ರತ್ಯೇಕವಾದವುಗಳು. ನೀವು ಗೌರವಿಸುತ್ತಿರುವುದು ನನ್ನ ವಿಜ್ಞಾನವನ್ನು. ಆದ್ದರಿಂದ ನಾನು ಸ್ಟಾಕ್‌ಹೋಮಿಗೆ ಬಂದೇ ಬರುತ್ತೇನೆ' ಎಂದು ಉತ್ತರಿಸಿದರು. ಕತೆ ಅಲ್ಲಿಗೇ ಮುಗಿಯಿತು. ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಮೇರಿಗೆ ಎಲ್ಲಿಲ್ಲದ ಸ್ವಾಗತ ದೊರೆಯಿತು. ಸ್ವೀಡನ್ನಿನ ರಾಜ ರಾಣಿ ಅವಳನ್ನು ಬಹು ಗೌರವದಿಂದ ಕಂಡರು.

ಹೀಗೆ ನೊಬೆಲ್ ಪ್ರಶಸ್ತಿಗಳ ಹಿಂದಿರುವ ಕತೆಗಳು ಒಂದೆರಡಲ್ಲ. ಆ ಕಥೆಗಳು ಪ್ರಶಸ್ತಿಯಷ್ಟೇ ಆಕರ್ಷಕ, ಸ್ವಾರಸ್ಯಕರ.

ಪ್ರತಿಕ್ರಿಯಿಸಿ: feedback@sudha.co.in